# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 01. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1522 |
| 02. | ಸದಸ್ಯರ ಹೆಸರು | : | ಶ್ರೀ ಕೆ.ವಿ.ನಾರಾಯಣಸ್ವಾಮಿ<br>(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| 03. | ಉತ್ತರಿಸುವ ದಿನಾಂಕ | : | 10.03.2022 |
| 04. | ಉತ್ತರಿಸುವ ಸಚಿವರು | : | ಮಾನ್ಯ ಗೃಹ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಗೃಹ ಇಲಾಖೆಯ ಎಲ್ಲಾ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ವಾರದ ರಜೆ ನೀಡಲಾಗುತ್ತಿದೆಯೇ; ನೀಡಿದ್ದಲ್ಲಿ ರಜೆಯ ದಿನವೂ ಕರ್ತವ್ಯ ನಿರ್ವಹಿಸಿದ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ರಜೆ ಭತ್ಯೆ ನೀಡಲಾಗುತ್ತಿದೆಯೇ; | ಪ್ರಸ್ತುತ ಪೊಲೀಸ್ ಕಾನ್ಸ್‌ಟೇಬಲ್ ಮತ್ತು ಹೆಡ್ ಕಾನ್ಸ್‌ಟೇಬಲ್ ವೃಂದದ ಸಿಬ್ಬಂದಿಗಳಿಗೆ ವಾರದ ರಜೆಯನ್ನು ನೀಡಲಾಗುತ್ತಿದೆ.<br>ತುರ್ತು ಮತ್ತು ಅನಿವಾರ್ಯ ಸಂದರ್ಭಗಳಲ್ಲಿ ವಾರದ ರಜೆಯಿಂದ ವಂಚಿತರಾಗುವ ಪೊಲೀಸ್ ಸಿಬ್ಬಂದಿಗಳಿಗೆ ವಾರದ ರಜೆ ಭತ್ಯೆಯನ್ನು ನೀಡಲಾಗುತ್ತದೆ. |
| ಆ) | ನೀಡುತ್ತಿದ್ದಲ್ಲಿ, ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಒಂದು ರಜಾ ದಿನದಲ್ಲಿ ಕರ್ತವ್ಯ ನಿರ್ವಹಿಸಿದ್ದಲ್ಲಿ ನೀಡಲಾಗುವ ರಜಾ ಭತ್ಯೆ ಎಷ್ಟು; | ವಾರದ ರಜೆಯಲ್ಲಿ ಕೆಲಸ ಮಾಡಿದ ಪೊಲೀಸ್ ಕಾನ್ಸ್‌ಟೇಬಲ್ ಮತ್ತು ಹೆಡ್ ಕಾನ್ಸ್‌ಟೇಬಲ್ ವೃಂದದ ಸಿಬ್ಬಂದಿಗಳಿಗೆ ರೂ.200/- ರಂತೆ ವಾರದ ರಜಾ ಭತ್ಯೆಯನ್ನು ನೀಡಲಾಗುತ್ತಿದೆ. |
| ಇ) | ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ನೀಡಲಾಗುವ ರಜಾ ಭತ್ಯೆಯ ಮೊತ್ತವೆಷ್ಟು; ಸದರಿ ಮೊತ್ತವನ್ನು ಯಾವ ಆಧಾರದ ಮೇಲೆ ನಿಗದಿ ಮಾಡಲಾಗಿದೆ; | ಸರ್ಕಾರದ ಆದೇಶ ಸಂಖ್ಯೆ: ಒಇ/187/ಪೊಸಿಇ/2013, ದಿ:12.06.2014ರನ್ವಯ ನಿಗದಿಪಡಿಸಲಾಗಿದೆ. |
| ಈ) | ರಜಾ ಭತ್ಯೆಯನ್ನು ಒಂದು ದಿನದ ವೇತನಕ್ಕೆ ಸಮನಾಗಿ ನೀಡದೆ ಕನಿಷ್ಠ ಮೊತ್ತವನ್ನು ನೀಡುತ್ತಿರುವುದು ಸೂಕ್ತವೇ; ಒಂದು ಪೂರ್ಣ ದಿನ ಕೆಲಸ ನಿರ್ವಹಿಸಿದಲ್ಲಿ ಆ ದಿನದ ವೇತನಕ್ಕೆ ಸಮನಾಗಿ ಭತ್ಯೆಯನ್ನು ನೀಡಬೇಕಲ್ಲವೇ; | |
| ಉ) | ಸರ್ಕಾರವು ರಜಾ ಭತ್ಯೆಯನ್ನು ಹೆಚ್ಚಳ ಮಾಡಲು ಇಚ್ಛಿಸಿದೆಯೇ; ಇಚ್ಛಿಸಿದ್ದಲ್ಲಿ ಯಾವ ಕಾಲಮಿತಿಯಲ್ಲಿ ಹೆಚ್ಚಳ ಮಾಡಲಾಗುವುದು? | ಇಲ್ಲ |

HD/42/PPS/2022

(ಆರಗ ಜ್ಞಾನೇಂದ್ರ)
ಮಾನ್ಯ ಗೃಹ ಸಚಿವರು